ಘಟ್ಟದಲ್ಲಿದೆ. ಪ್ರಸಕ್ತ ಸಾಲಿನಲ್ಲಿ ಇಂತಹ ಗ್ರಾಮಗಳಿಗೆ ಹೆಚ್ಚಿನ ಹಣವನ್ನು ಒದಗಿಸುವ ಪ್ರಸ್ತಾಪ ಸರಕಾರದ ಪರಿಶೀಲನೆಯಲ್ಲಿದೆ ಮತ್ತು ಹೆಚ್ಚಿನ ಹಣವು ಬಿಡುಗಡೆಯಾದ ಕೂಡಲೇ, ಈ ಯೋಜನೆಗಳ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಲಾಗುವುದು. ಈ ಗ್ರಾಮಗಳಿಗೆ ಜಿಲ್ಲಾಧಿಕಾರಿಯವರ ಸೂಚನೆಯ ಮೇರೆಗೆ ವಾಹನ ಮತ್ತು ಟ್ಯಾಂಕರ್‌ಗಳಿಂದ ನೀರನ್ನು ಸರಬರಾಜು ಮಾಡಲಾಗುವುದು.

ಶ್ರೀ ಎಫ್. ಎ. ಕೊಪ್ಪದ್ .— ರಾಮದುರ್ಗ ತಾಲ್ಲೂಕಿನ ಕಡಕೋಳ, ಬಟಕುರ್ಕಿ, ಹುಲ್ಲುಂಡ ಗ್ರಾಮಗಳಿಗೆ ಕುಡಿಯುವನೀರು ಇಲ್ಲ. ವಿದ್ಯುಚ್ಛಕ್ತಿ ಇಲ್ಲ, ನೀರು ಸಿಗಬೇಕಾದರೆ ನಮಗೆ ವಿದ್ಯುಚ್ಛಕ್ತಿ ಸಿಗುವುದಿಲ್ಲ. ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮ್ಮಹತ್ತಿರ ರೊಕ್ಕ ಇಲ್ಲ ಬೇಕಾದ್ದು ಮಾಡಿರಿ ಎಂದು ಹೇಳುತ್ತಾರೆ. ನಮಗೆ ಕುಡಿಯುವ ನೀರು ಸಿಗುವಹಾಗೆ ಮಾಡಬೇಕೆಂದು ಮಾನ್ಯಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ ತಾವು ಒಮ್ಮೆ ನಮ್ಮ ಕಡೆಗೆ ಟೂರ್‌ಹಾಕಿಕೊಂಡು ಬಂದು ನೋಡಬೇಕು. ಕೊಳವೆಬಾವಿ ಹಾಕಿದ್ದೀರಿ, ಅವುಗಳಿಗೆ ಕೈಪಂಪ್ ಹಾಕಿಲ್ಲ. ನಮಗೆ ನೀರು ಸಿಗುವ ಸರಿಯಾದ ವ್ಯವಸ್ಥೆ ಮಾಡಬೇಕು. ಬೇಸಿಗೆಕಾಲ ಬರುತ್ತಿದೆ ಕುಡಿಯುವ ನೀರಿನ ತೊಂದರೆ ಇದೆ. ನಮ್ಮ ಕಡೆಗೆ ಪ್ರವಾಸ ಬಂದು ಮಾನ್ಯ ಮಂತ್ರಿಗಳು ನೋಡಬೇಕು.

ಶ್ರೀ ಅಬ್ದುಲ್ ನಜೀರ್‌ಸಾಬ್ .— ಮಾನ್ಯ ಸದಸ್ಯರು ಕೊಟ್ಟಿರತಕ್ಕ 1ಸಾವಿರ ರೂಪಾಯಿ ಹಣ ಸಾಕಾಗುವುದಿಲ್ಲವೆಂದು ಹೇಳುತ್ತಿದ್ದಾರೆ. 1980ರಿಂದ 1983ರವರೆಗೆ ಮಂಜೂರಾದ ಕೊಳವೆ ಬಾವಿಗಳು 2090, ಅದಕ್ಕೆ ಬೇಕಾಗಿರತಕ್ಕ ಹಣ 50ಕೋಟಿ ರೂಪಾಯಿ, ರಾಜ್ಯ ಮತ್ತು ಕೇಂದ್ರ ವಲಯಗಳಿಂದ ನಮಗೆ 8ಕೋಟಿ ರೂಪಾಯಿ ಮಾತ್ರ ಸಿಕ್ಕಿದೆ. ನಮ್ಮಸರ್ಕಾರ 460 ಗ್ರಾಮಗಳಲ್ಲಿ ಆದ್ಯತೆಯ ಮೇಲೆ ಕುಡಿಯುವ ನೀರಿನ ಕೆಲಸವನ್ನು ಮಾಡಿ ಮುಗಿಸಿದೆ. ಬಡ್‌ಜಟ್‌ನಲ್ಲಿ 1ಸಾವಿರ ರೂಪಾಯಿ ಟೋಕನ್‌ಗ್ರಾಂಟ್ ಕೊಟ್ಟರೆ ಈ ವರ್ಷ ಮಾಡುವುದಕ್ಕೆ ಆಗುವುದಿಲ್ಲ. ಮುಂದಿನ ವರ್ಷ ಕುಡಿಯುವ ನೀರಿನ ಕೆಲಸವನ್ನು ಮಾಡಿ ಮುಗಿಸುತ್ತೇವೆ. ಕೊಳವೆಬಾವಿಗಳನ್ನು ಹಾಕಿ ಆಲ್ಲಿ ಕೈಪಂಪ್‌ಗಳನ್ನು ಜೋಡಿಸಿಲ್ಲವೆಂದು ಮಾನ್ಯಸದಸ್ಯರು ಹೇಳಿದ್ದಾರೆ. ಎಲ್ಲೆಲ್ಲಿ ಆ ರೀತಿಯಾಗಿದೆ ಎಂಬುದನ್ನು ನನಗೆ ತಿಳಿಸಿದರೆ ನಾನು ಕೂಡಲೇ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಫ್. ಎ. ಕೊಪ್ಪದ್ .— ನೀವು ಎಷ್ಟೇ ಕೊಳವೆಬಾವಿಗಳನ್ನು ತೋಡಿದರೂ ನೀರು ಸಾಕಾಗುವುದಿಲ್ಲ. ಮೋಟಾರುಪಂಪ್ ಜೋಡಿಸಿದರೂ ನೀರು ಸಾಲದೇ ಇರುವಾಗ ನೀವು ಹೇಗೆ ಕುಡಿಯುವ ನೀರಿನ ಸಮಸ್ಯೆಯನ್ನು ಹೋಗಲಾಡಿಸುತ್ತೀರಿ? ನೀವು ಒಮ್ಮೆ ಸ್ವತಹ ಬಂದು ನೋಡಿ. ನೀವು ಒಂದು ಸಾವಿರ ರೂಪಾಯಿ ರೊಕ್ಕ ಕೊಟ್ಟರೆ ಅದು ಯಾವುದಕ್ಕೂ ಸಾಲುವುದಿಲ್ಲ.

ಶ್ರೀ ಅಬ್ದುಲ್ ನಜೀರ್‌ಸಾಬ್ .— 1ಸಾವಿರ ರೂಪಾಯಿ ಟೋಕನ್‌ಗ್ರಾಂಟ್ ಪ್ರತಿವರ್ಷ ಕೊಡಲಾಗುತ್ತಿದೆ. ಈ ವರ್ಷ ಮಾಡಲಿಕ್ಕೆ ಆಗದಿದ್ದರೂ ಮುಂದಿನ ವರ್ಷ ಅಂದರೆ 1984-85ರಲ್ಲಿ ಆ ಗ್ರಾಮಗಳಿಗೆ ಹೆಚ್ಚಿನ ಹಣ ಒದಗಿಸಿಕೊಂಡು ಹೆಚ್ಚು ಗ್ರಾಂಟ್ ಒದಗಿಸಿಕೊಡುತ್ತೇವೆ.

ಶ್ರೀ ಎಫ್. ಎ. ಕೊಪ್ಪದ್ :—ಸಧ್ಯಕ್ಕೆ ಕುಡಿಯುವುದಕ್ಕೆ ನೀರಿಲ್ಲ, ಅದಕ್ಕೆ ಏನು ಮಾಡುತ್ತೀರಿ?

ಶ್ರೀ ಅಬ್ದುಲ್ ನಜೀರ್‌ಸಾಬ್ .— ಜಿಲ್ಲಾಧಿಕಾರಿಗಳು ಟ್ಯಾಂಕರ್‌ಮೂಲಕ ನೀರನ್ನು ಒದಗಿಸ ಬೇಕೆಂದು ಈ ಮೂಲಕ ಕ್ರಮತೆಗೆದುಕೊಂಡು ಆದೇಶ ಕೊಟ್ಟಿದ್ದೇನೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಹೊಸ ಪಶುವೈದ್ಯ ಚಿಕಿತ್ಸಾಲಯಗಳ ಸ್ಥಾಪನೆ

ಪ್ರಶ್ನೆ : 190 (148) ಶ್ರೀ ಕೆ ವಸಂತ ಬಂಗೇರ (ಬೆಳ್ತಂಗಡಿ) .— ಮಾನ್ಯ ಪಶುಸಂಗೋಪನಾ ಹಾಗೂ ತೋಟಗಾರಿಕೆಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) 1979ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನ ಮಡಂತ್ಯಾರು ಮತ್ತು ಹತ್ಯಡ ಎಂಬಲ್ಲಿ ಹೊಸ ಪಶುವೈದ್ಯ ಕೇಂದ್ರಗಳು ಮಂಜೂರಾಗಿದ್ದು ಸ್ಥಳೀಯ ಪಂಚಾಯತ್ ಮತಿಯಿಂದ ಸರಕಾರಕ್ಕೆ ಕಟ್ಟಬೇಕಾಗಿದ್ದ ಹಣ ಕಟ್ಟಿದ್ದರೂ ಸದರಿ ಸ್ಥಳಗಳಲ್ಲಿ ಪಶುವೈದ್ಯ ಕೇಂದ್ರಗಳನ್ನು ಈವರೆಗೂ ಪ್ರಾರಂಭಿಸದಿರಲು ಕಾರಣವೇನು ; ಹಾಗೂ ಯಾವಾಗ ಪ್ರಾರಂಭಿಸಲಾಗುವುದು ;

ಆ) ಬೆಳ್ತಂಗಡಿ ತಾಲ್ಲೂಕಿನ ನಾರಾವಿ ಪಶುವೈದ್ಯ ಶಾಲೆಯನ್ನು ಮೇಲ್ದರ್ಜೆಗೆ ಸೇರಿಸಲು 1979 ರಲ್ಲಿ ಮಂಜೂರಾತಿ ದೊರಕಿದ್ದರೂ ಈವರೆಗೂ ಆ ಬಗ್ಗೆ ಕ್ರಮ ಕೈಗೊಳ್ಳದಿರಲು ಕಾರಣವೇನು; ಹಾಗೂ ಯಾವಾಗ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ;

ಇ) ಪಶುವೈದ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಅತೀವವಾಗಿದ್ದು ಆ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ;

ಈ) ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಹೈನು ಶಿಕ್ಷಣ ಹೊಂದಿದ ಅಭ್ಯರ್ಥಿಗಳಿಗೆ ಇಲಾಖೆಯಲ್ಲಿ ಅವಕಾಶ ನೀಡುವ ವಿಚಾರದಲ್ಲಿ ಸರಕಾರದವರು ಕೈಗೊಂಡಿರುವ ಕ್ರಮ ಗಳೇನು ?

ಉತ್ತರ : ಶ್ರೀ ವಿಶ್ವನಾಥ ರೆಡ್ಡಿ ಮುದ್ನಾಳ್ (ಪಶುಸಂಗೋಪನೆ ಹಾಗೂ ತೋಟಗಾರಿಕೆ ಸಚಿವರು) .— ಅ) ಸರ್ಕಾರದ 1979ರ ಆದೇಶದಲ್ಲಿ ಸಿಬ್ಬಂದಿಗಳ ನೇಮಕಾತಿ ಮತ್ತು ಆರ್ಥಿಕ

ಖರ್ಚು ವೆಚ್ಚಗಳ ಮಂಜೂರಾತಿ ನೀಡಿರಲಿಲ್ಲ. ಆದ್ದರಿಂದ ಈ ಪಶು ಚಿಕಿತ್ಸಾಲಯಗಳನ್ನು ಪ್ರಾರಂಭಿಸಲಾಗಲಿಲ್ಲ. ಪರಂತು ಪ್ರಾರಂಭಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುವುದು.

ಆ) ಮೇಲಿನಂತೆ,

ಇ) ಪಶು ಪರೀಕ್ಷಕ ಮತ್ತು ಔಷಧಿ ಮಿಶ್ರಣ ವರ್ಗದವರ ತರಬೇತಿಗಾಗಿ 24 ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

ಈ) ಹೈನು ಶಿಕ್ಷಣ ಹೊಂದಿದ ಅಭ್ಯರ್ಥಿಗಳನ್ನು ಪಶುಪರೀಕ್ಷರ ನೌಕರಿ ಭರ್ತಿನಿಯಮಾವಳಿಯಲ್ಲಿ ಸೇರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ. ವಸಂತಬಂಗೇರ .—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೈನು ಶಿಕ್ಷಣ ಹೊಂದಿದ ಅಭ್ಯರ್ಥಿಗಳನ್ನು ಪಶುಪರೀಕ್ಷರ ನೌಕರಿ ಭರ್ತಿ ನಿಯಮಾವಳಿಯಲ್ಲಿ ಸೇರಿಸುವ ವಿಷಯ ಸರ್ಕಾರದ ಪರಿಶೀಲನೆಯ ಲ್ಲಿದೆ ಎನ್ನುವ ವಿಚಾರವನ್ನು ತಿಳಿಸಿದ್ದಾರೆ. 1979ರಲ್ಲಿ ಮಂಜೂರಾತಿಯನ್ನು ನೀಡ ಲಾಗಿದೆ. 5ವರ್ಷಗಳಿಂದ ಇದು ಪರಿಶೀಲನೆಯಲ್ಲಿದೆ. ಇನ್ನು ಎಷ್ಟು ವರ್ಷ ಪರಿಶೀಲನೆಯಲ್ಲಿರುತ್ತದೆ? ಯಾವಾಗ ಪ್ರಾರಂಭ ಮಾಡುತ್ತೀರಿ? ಎರಡನೆಯದಾಗಿ ಸಿಬ್ಬಂದಿ ಕೊರತೆಯಿದೆಯೆಂದು ಹೇಳಿದ್ದೀರಿ. ಉಜಿರೆಯ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಹೈನು ಶಿಕ್ಷಣ ಹೊಂದಿದ ಅಭ್ಯರ್ಥಿಗಳಿಗೆ ಒಂದು ವರ್ಷದ ಹಿಂದೆಯೇ ಇಲಾಖೆಯಲ್ಲಿ ನೇಮಕಮಾಡಿಕೊಳ್ಳುತ್ತೇವೆಂದು ಒಪ್ಪಿ ಕೊಂಡಿದ್ದೀರಿ. ಆದರೆ ಈಗ ತಮ್ಮ ಉತ್ತರದಲ್ಲಿ ಅದು ಇನ್ನೂ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ತಾವು ನೇಮಕ ಮಾಡಿಕೊಳ್ಳುತ್ತೇವೆಂದು ಹೇಳಿ 1ವರ್ಷವಾಗಿದೆ. ಅವರನ್ನು ಯಾವಾಗ ತಮ್ಮ ಇಲಾಖೆಯಲ್ಲಿ ಸೇರಿ ಸುವ ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಎಂ. ಪಿ. ಪ್ರಕಾಶ್ (ಪಶುಸಂಗೋಪನಾ ಮಂತ್ರಿಯವರ ಪರವಾಗಿ) .— 1979ರಲ್ಲಿ 150 ಗ್ರಾಮೀಣ ಪಶುವೈದ್ಯ ಚಿಕಿತ್ಸಾಲಯಗಳನ್ನು ಮೇಲ್ದರ್ಜೆಗೆ ಏರಿಸಲಾಯಿತು. ಆದರೆ ಸಿಬ್ಬಂದಿ ನೇಮ ಕಾತಿ ಮತ್ತು ಆರ್ಥಿಕ ಖರ್ಚುವೆಚ್ಚಗಳ ಮಂಜುರಾತಿ ಇಲ್ಲದೇ ಇದ್ದುದರಿಂದ ಸ್ವಲ್ಪ ವಿಳಂಬವಾಯಿತು. 1982-83ನೇ ಸಾಲಿನಲ್ಲಿ 204 ಪಶುವೈದ್ಯ ಚಿಕಿತ್ಸಾಲಯಗಳನ್ನು ಮಂಜೂರು ಮಾಡಿದರೂ ತಾಂತ್ರಿಕ ಸಿಬ್ಬಂದಿ ಕೊರತೆ ಇದ್ದುದರಿಂದ, ಪರ್ಮಿಷನ್ ಕೊಡಲಿಕ್ಕೆ ಆಗಲಿಲ್ಲ. ತಾಂತ್ರಿಕ ಸಿಬ್ಬಂದಿ, ಪಶು ಪರೀಕ್ಷಕರು, ಔಷಧಿ ಇವುಗಳನ್ನೆಲ್ಲಾ ಒದಗಿಸಿಕೊಂಡು, 24 ತರಬೇತಿಕೇಂದ್ರಗಳನ್ನು ನಿರ್ಮಿಸಿ, ಪಶುಪರೀಕ್ಷಕರ ನೌಕರಿ ಭರ್ತಿ ನಿಯಮಾವಳಿಗಳನ್ನು ಸರಿಮಾಡಿಕೊಂಡು, ಇವುಗಳೆಲ್ಲಾ ಮಾಡಲು ತೀವ್ರ ಪರಿಶೀಲನೆ ಯಲ್ಲಿವೆ. ಇದರ ಬಗ್ಗೆ ಸ್ವಲ್ಪ ದಿವಸಗಳಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುವುದು.

ವಿಷಯ : ರಾಜ್ಯದಲ್ಲಿ ಅಂತ್ಯೋದಯ ಯೋಜನೆಯ ಅನುಷ್ಠಾನದ ಬಗ್ಗೆ

ಪ್ರಶ್ನೆ : 173 (530) ಶ್ರೀ ಭೀಮಣ್ಣ ಖಂಡ್ರೆ (ಬುಲ್ಕಿ) .— ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ.—

ಅ) ರಾಜ್ಯದಲ್ಲಿ ಅಂತ್ಯೋದಯ ಕಾರ್ಯಕ್ರಮವನ್ನು ಜಾರಿಗೊಳಿಸುವುದಕ್ಕೆ, ಬಜೆಟ್‌ನಲ್ಲಿ 1983-84ರಲ್ಲಿ ಎಷ್ಟು ಹಣ ನಿಗದಿಪಡಿಸಲಾಗಿದೆ ;

ಆ) ಎಷ್ಟು ತಾಲ್ಲೂಕುಗಳನ್ನು ಆರಿಸಲಾಗಿದೆ ಮತ್ತು (ಪ್ರತಿಯೊಂದು ತಾಲ್ಲೂಕಿಗೆ ಎಷ್ಟು ಹಣ ಖರ್ಚಾಗಿದೆ);

ಇ) ತಾಲ್ಲೂಕುವಾರು ಎಷ್ಟು ಜನ ಪ್ರಯೋಜನ ಪಡೆದಿದ್ದಾರೆ ;

ಈ) ಒಟ್ಟು ಅರ್ಹ ಕುಟುಂಬಗಳು ಎಷ್ಟು ? ಯಾವ ಯಾವ ಆಧಾರಗಳ ಮೇಲೆ ಈ ಎಲ್ಲ ಅರ್ಹ ಕುಟುಂಬಗಳನ್ನು ಗುರುತಿಸಲಾಗಿದೆ ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) .— ಅ) ಬಜೆಟ್‌ನಲ್ಲಿ 1983-84ನೇ ಸಾಲಿನಲ್ಲಿ ಅಂತ್ಯೋದಯ ಕಾರ್ಯಕ್ರಮ ಜಾರಿ ಗೊಳಿಸುವುದಕ್ಕೆ 175 ಲಕ್ಷ ರೂ. ಗಳನ್ನು ನಿಗದಿಪಡಿಸಲಾಗಿದೆ.

ಆ) ಒಟ್ಟು 46 ತಾಲ್ಲೂಕುಗಳನ್ನು ಈ ಕಾರ್ಯಕ್ರಮಕ್ಕೆ ಆರಿಸಲಾಗಿದೆ. ವಿವರಗಳನ್ನು ಅನು ಬಂಧ-1ರಲ್ಲಿ ಒದಗಿಸಲಾಗಿದೆ.

ಇ) ಒಟ್ಟು 17,679 ಕುಟುಂಬಗಳನ್ನು ಗುರುತಿಸಲಾಗಿದೆ. ಇದರಲ್ಲಿ ಇದುವರೆವಿಗೂ 12,053 ಕುಟುಂಬಗಳಿಗೆ ಪ್ರಯೋಜನ ದೊರಕಿಸಿ ಕೊಡಲಾಗಿದೆ. ಹಾಗೂ 6,74,677 ಲಕ್ಷ ರೂ. ಗಳನ್ನು ಸಹಾಯ ಧನವನ್ನಾಗಿ ವಿತರಣೆ ಮಾಡಲಾಗಿದೆ.

ಈ) ಒಟ್ಟು 17,679 ಅರ್ಹ ಕುಟುಂಬಗಳನ್ನು ಗುರುತಿಸಲಾಗಿದೆ. ಇದರಲ್ಲಿ 5,880 ಪರಿಶಿಷ್ಟ ಜಾತಿ ಪಂಗಡಗಳ ಕುಟುಂಬಗಳಿವೆ. ಪ್ರತಿ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು ತಮ್ಮ ತಮ್ಮ ತಾಲ್ಲೂಕಿನಲ್ಲಿ ಗ್ರಾಮ ಸಭೆಗಳ ಅಂಗೀಕಾರ ಪ್ರಕಾರ ಬಡವರಲ್ಲಿ ಅತೀ ಬಡವರನ್ನು ಅವರವರ ವೈಯ ಕ್ತಿಕ ಆಧಾಯಕ್ಕನುಸಾರವಾಗಿ ಪ್ರಯೋಜನದಾರರನ್ನು ಅಂದರೆ ಕುಟುಂಬಗಳನ್ನು ಗುರುತಿಸಲಾಗಿದೆ. ಈ ಕಾರ್ಯಕ್ರಮವು ಪ್ರತಿ ಜಿಲ್ಲಾ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗಳಿಂದ ಜಾರಿಗೊಳಿಸಲಾಗಿದೆ.